**ಠೇವಣಿಗಳ ಮೇಲೆ ಬಡ್ಡಿಯ ದರಗಳು**
**ಭಾರತೀಯ ರಿಸರ್ವ್ ಬ್ಯಾಂಕು**

**ಕೇಂದ್ರ ಕಚೇರಿ**
**ಬ್ಯಾಂಕಿಂಗ್ ಕಾರ್ಯಾಚರಣೆಗಳ ಇಲಾಖೆ ಮತ್ತು ಅಭಿವೃದ್ಧಿ ಕೇಂದ್ರ-1**
**ವಿಶ್ವ ವ್ಯಾಪಾರ ಕೇಂದ್ರ**
**ಕಫೆ ಪರೇಡ್, ಕೊಲಾಬಾ, ಮುಂಬೈ- 400005.**

ಏಪ್ರಿಲ್ 19, 2001
ಚೈತ್ರ 29, 1923 (ಶಕೆ)

ಡಿಬಿಒಡಿ ಸಂಖ್ಯೆ. ಡಿಐಆರ್.ಬಿಸಿ. 104/13.03.00/2000-01

**ಠೇವಣಿಗಳ ಮೇಲೆ ಬಡ್ಡಿಯ ದರಗಳು**

ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ 21 ಮತ್ತು 35ಎ ನೇ ನಿಯಮಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ತನ್ನ ಮಾರ್ಗದರ್ಶಕ ಸೂಚನೆ ಡಿಬಿಒಡಿ.ಸಂಖ್ಯೆ.ಡಿಐಆರ್.ಬಿಸಿ. 46/13.03.00/2000-2001, ದಿನಾಂಕ ನವೆಂಬರ್ 4, 2000 ಇದನ್ನು ಭಾಗಶಃ ಮಾರ್ಪಾಡು ಮಾಡಿ ಭಾರತೀಯ ರಿಸರ್ವ್ ಬ್ಯಾಂಕು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯ ಮತ್ತು ಯುಕ್ತ ಎಂದು ಮನಗಂಡು ಈ ಮುಂದಿನಂತೆ ನಿರ್ದೇಶಿಸುತ್ತದೆ;

i. ಮೇಲೆ ತಿಳಿಸಿದ ಮಾರ್ಗದರ್ಶಕ ಸೂಚನೆ ಅನುಬಂಧ-Iರ ಬದಲಾಗಿ ಪರಿಷ್ಕೃತ ಅನುಬಂಧವನ್ನು ಪ್ರತಿಸ್ಥಾಪಿಸತಕ್ಕದ್ದು.

ii. ಮೇಲೆ ತಿಳಿಸಿದ ಮಾರ್ಗದರ್ಶಕ ಸೂಚನೆ 22ನೇ ಪ್ಯಾರಾದ (ಸಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತಿಸ್ಥಾಪಿಸತಕ್ಕದ್ದು.

" (ಸಿ) ಠೇವಣಿಗಳ ಮೇಲೆ ಬಡ್ಡಿ ಸಂದಾಯ ಮಾಡುವ ವಿಷಯದಲ್ಲಿ ಯಾವುದೇ ಗಾತ್ರದ ಸಾಮಾನ್ಯ ಠೇವಣಿಗಳಿಗೆ ಹೋಲಿಸಿದರೆ ಹೆಚ್ಚಿನ ಮತ್ತು ನಿಗದಿತ ಬಡ್ಡಿ ದರವನ್ನು ನೀಡುವಂಥ ಹಿರಿಯ ನಾಗರಿಕರಿಗೆ ವಿಶೇಷವಾಗಿ ಸಂಬಂಧಿಸಿದ ನಿಗದಿತ ಠೇವಣಿ ಯೋಜನೆಗಳ ಮತ್ತು ಠೇವಣಿಗಳ ಗಾತ್ರದ ಆಧಾರದ ಮೇಲೆ ವ್ಯತ್ಯಾಸಾತ್ಮಕ ಬಡ್ಡಿ ದರಗಳನ್ನು ಅನುಮತಿಸುವಂಥ 15 ಲಕ್ಷ ರೂಪಾಯಿಗಳ ಮತ್ತು ಅದಕ್ಕೂ ಹೆಚ್ಚಿನ ಏಕ ಸಾವಧಿ ಠೇವಣಿಗಳ ಸಂಬಂಧದಲ್ಲಿ ಹೊರತು ಪಡಿಸಿ, ಒಂದೇ ದಿನ ಮತ್ತು ಒಂದೇ ದಿನ ಅವಧಿ ತುಂಬುವ ಅವಧಿಗೆ ಅಂಗೀಕರಿಸಿರುವಂಥ ಠೇವಣಿಗಳನ್ನು ಬ್ಯಾಂಕಿನ ಒಂದೇ ಕಚೇರಿಯಲ್ಲಿ ಅಥವಾ ಬೇರೆ ಬೇರೆ ಕಚೇರಿಗಳಲ್ಲಿ ಸ್ವೀಕರಿಸಿದ್ದರೂ, ಅಂಥ ಒಂದು ಠೇವಣಿ ಮತ್ತು ಮತ್ತೊಂದು ಠೇವಣಿ ನಡುವೆ ತಾರತಮ್ಯ ಮಾಡುವುದು. ವ್ಯತ್ಯಾಸಾತ್ಮಕ ಬಡ್ಡಿ ದರಗಳನ್ನು ನೀಡುವುದಕ್ಕೆ ಅನುಮತಿ ನೀಡುವುದು ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

i) ಒಂದೇ ದಿನ ಅವಧಿ ತುಂಬುವ ಠೇವಣಿಗಳಿಗೆ ವ್ಯತ್ಯಾಸಾತ್ಮಕ ಬಡ್ಡಿ ದರಗಳನ್ನು ಕೊಡ ಮಾಡಲು ಅನುಮತಿ ನೀಡುವುದು 15 ಲಕ್ಷ ರೂಪಾಯಿ ಮತ್ತು ಅದಕ್ಕೂ ಹೆಚ್ಚಿನ ಮೊತ್ತದ ಏಕ ಸಾವಧಿ ಠೇವಣಿಗಳಿಗೆ ಅನ್ವಯವಾಗತಕ್ಕದ್ದು. ಆದ್ದರಿಂದ ಬ್ಯಾಂಕುಗಳು 15 ಲಕ್ಷ ರೂಪಾಯಿ ಮತ್ತು ಅದಕ್ಕೂ ಹೆಚ್ಚಿನ ಠೇವಣಿಗಳಿಗೆ ಒಂದೇ ರೀತಿಯ ಬಡ್ಡಿ ದರವನ್ನು ಅಥವಾ ಬೇರೆ ಬೇರೆ ಬಡ್ಡಿ ದರಗಳನ್ನು ನೀಡಬಹುದು. ಒಂದೇ ದಿನ ಅವಧಿ ತುಂಬುವ 15 ಲಕ್ಷ ರೂಪಾಯಿಗಳಿಂತ ಕಡಿಮೆ ಮೊತ್ತದ ಠೇವಣಿಗಳಿಗೆ ಒಂದೇ ಬಡ್ಡಿ ದರವು ಅನ್ವಯಿಸುತ್ತದೆ.

ii) ಯಾವ ಠೇವಣಿಗಳ ಮೇಲೆ ವ್ಯತ್ಯಾಸಾತ್ಮಕ ಬಡ್ಡಿಯನ್ನು ಸಂದಾಯ ಮಾಡಲಾಗುವುದೋ ಅಂಥ ಠೇವಣಿಗಳು ಸೇರಿದಂತೆ ಠೇವಣಿಗಳ ಮೇಲೆ ಸಂದಾಯ ಮಾಡತಕ್ಕ ಬಡ್ಡಿ ದರಗಳ ಅನುಸೂಚಿಯನ್ನು ಬ್ಯಾಂಕುಗಳು ಮುಂಚಿತವಾಗಿಯೇ ಪ್ರಕಟಿಸಬೇಕು. ಬ್ಯಾಂಕುಗಳು ಸಂದಾಯ ಮಾಡುವ ಬಡ್ಡಿ ದರಗಳು ಅನುಸೂಚಿಯ ಪ್ರಕಾರ ಇರಬೇಕೇ ಹೊರತು ಠೇವಣಿದಾರ ಮತ್ತು ಬ್ಯಾಂಕು ನಡುವೆ ಮಾತುಕತೆಗೆ ಒಳಪಡತಕ್ಕದ್ದಲ್ಲ.

iii) ಮೇಲೆ ಹೇಳಿದ ಮಾರ್ಗದರ್ಶಕ ಸೂಚನೆ 9ನೇ ಪ್ಯಾರಾದ (i) ನೇ ಖಂಡದ ಬದಲಿಗೆ ಈ ಮುಂದಿನ ಖಂಡವನ್ನು ಪ್ರತಿಸ್ಥಾಪಿಸತಕ್ಕದ್ದು:

" (i) ಬ್ಯಾಂಕು, ಠೇವಣಿ ಇಡುವ ಸಮಯದಲ್ಲಿ ಒಪ್ಪಿಕೊಂಡಿರುವಂಥ ಠೇವಣಿಯ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಸಾವಧಿ ಠೇವಣಿಗಳನ್ನು ಹಿಂದಕ್ಕೆ ಪಡೆಯುವುದಕ್ಕೆ, ಠೇವಣಿದಾರನಿಂದ ಬಂದ ಕೋರಿಕೆಯನ್ನು ಆಧರಿಸಿ, ಅನುಮತಿ ನೀಡಬಹುದು ಸಾವಧಿ ಠೇವಣಿಗಳನ್ನು ಅವಧಿ ತುಂಬುವುದಕ್ಕೆ ಮೊದಲೇ ಹಿಂಪಡೆಯುವುದಕ್ಕೆ ವಿಧಿಸುವಂಥ ತನ್ನದೇ ಆದ ದಂಡ ಬಡ್ಡಿ ದರವನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನು ಬ್ಯಾಂಕು ಹೊಂದಿರತಕ್ಕದ್ದು. ಠೇವಣಿದಾರರಿಗೆ ಠೇವಣಿ ದರದ ಜೊತೆಗೆ ಅನ್ವಯವಾಗುವಂಥ ದಂಡ ಬಡ್ಡಿ ದರದ ಬಗ್ಗೆಯೂ ಬ್ಯಾಂಕು ತಿಳಿ ಹೇಳುವಂತೆ ನೋಡಿಕೊಳ್ಳಬೇಕು. ಆದರೆ, ಬ್ಯಾಂಕು ವ್ಯಕ್ತಿಗಳು ಮತ್ತು ಹಿಂದು ಅವಿಭಕ್ತ ಕುಟುಂಬಗಳಲ್ಲದ ಎಂಟಿಟಿಗಳು ಹೊಂದಿರುವ ದೊಡ್ಡ ಮೊತ್ತದ ಠೇವಣಿಗಳನ್ನು ಅವಧಿ ತುಂಬುವುದಕ್ಕೆ ಮುಂಚೆಯೇ ಹಿಂಪಡೆಯುವುದಕ್ಕೆ ತನ್ನ ವಿವೇಚನೆಯಂತೆ ಅನುಮತಿ ನೀಡದೇ ಇರಬಹುದು. ಆದರೆ, ಬ್ಯಾಂಕು ಮುಂಚಿತವಾಗಿ ಅಂದರೆ ಅಂಥ ಠೇವಣಿಗಳನ್ನು ಅಂಗೀಕರಿಸುವ ಸಮಯದಲ್ಲೇ ಅವಧಿ ತುಂಬುವುದಕ್ಕೆ ಮುಂಚೆ ಠೇವಣಿಗಳನ್ನು ಹಿಂಪಡೆಯಲು ಅನುಮತಿಸದಿರುವ ತನ್ನ ನೀತಿಯನ್ನು ಅಂಥ ಠೇವಣಿದಾರರಿಗೆ ಅಧಿಸೂಚಿಸತಕ್ಕದ್ದು."

iv. ಪ್ಯಾರಾ 11 ರ (i) ನೇ ಖಂಡದ ಬದಲಿಗೆ ಈ ಮುಂದಿನ ಖಂಡವನ್ನು ಪ್ರತಿಸ್ಥಾಪಿಸತಕ್ಕದ್ದು:

"(i) ಬ್ಯಾಂಕು, ಅವಧಿ ಮೀರಿದ ಠೇವಣಿಯನ್ನು ಅಥವ ಅದರ ಭಾಗವನ್ನು ತನ್ನ ಸ್ವಂತ ವಿವೇಚನೆಯಂತೆ ನವೀಕರಿಸಬಹುದು. ಆದರೆ, ಅವಧಿ ಮೀರಿದ ಅವಧಿಯು, ಅವಧಿ ತುಂಬಿದ ದಿನಾಂಕದಿಂದ ನವೀಕರಿಸಿದ ದಿನಾಂಕದವರೆಗೆ (ಎರಡು ದಿನಗಳೂ ಸೇರಿ) 14 ದಿವಸಗಳನ್ನು ಮೀರತಕ್ಕದ್ದಲ್ಲ ಮತ್ತು ಹಾಗೆ ನವೀಕರಿಸಿದ ಠೇವಣಿಯ ಮೊಬಗಲಿನ ಮೇಲೆ ಸಂದಾಯ ಮಾಡತಕ್ಕ ಬಡ್ಡಿ ದರವು, ಅವಧಿ ತುಂಬುವ ದಿನಾಂಕದಂದು ಚಾಲ್ತಿಯಲ್ಲಿದ್ದಂತೆ, ನವೀಕರಣದ ಅವಧಿಗೆ ಸಮುಚಿತ ಬಡ್ಡಿ ದರವಾಗಿರತಕ್ಕದ್ದು. ಅವಧಿ ಮೀರಿದ ಅವಧಿ 14 ದಿವಸಗಳನ್ನು ಮೀರಿರುವಂತಹ ಅವಧಿ ಮೀರಿದ ಠೇವಣಿಗಳ ವಿಷಯದಲ್ಲಿ ಮತ್ತು ಠೇವಣಿದಾರನು ಅವಧಿ ಮೀರಿದ ಠೇವಣಿಯ ಇಡೀ ಮೊತ್ತವನ್ನು ಅಥವಾ ಅದರ ಭಾಗವನ್ನು ಹೊಸ ಸಾವಧಿ ಠೇವಣಿಯಾಗಿ ಇಟ್ಟಲ್ಲಿ, ಬ್ಯಾಂಕು ಹಾಗೆ ಹೊಸ ಠೇವಣಿಯಾಗಿಟ್ಟ ಮೊತ್ತದ ಮೇಲೆ ಅವದಿ ಮೀರದ ಅವಧಿಗೆ ತನ್ನದೇ ಆದ ಬಡ್ಡಿ ದರವನ್ನು ನಿಗದಿ ಮಾಡಬಹುದು".

2. ಮಾರ್ಗದರ್ಶಕ ಸೂಚನೆ ಡಿಬಿಒಡಿ ಸಂಖ್ಯೆ. ಡಿಐಆರ್.ಬಿಸಿ. 46/13-03-00/2000-2001 ದಿನಾಂಕ ನವೆಂಬರ್ 4, 2000 ಇದರ ಇತರ ಉಪಬಂಧಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

(ಕೆ.ಎಲ್. ಕೇತಾರ್ ಪೌಲ್)
ಕಾರ್ಯನಿರ್ವಾಹಕ ನಿರ್ದೇಶಕ.

## ಅನುಬಂಧ

ದೇಶೀಯ/ ಸಾಮಾನ್ಯ ಅನಿವಾಸಿ/ ಅನಿವಾಸಿ ವಿಶೇಷ ರೂಪಾಯಿ ಖಾತೆಗಳಲ್ಲಿ ಹೊಂದಿರುವ ಠೇವಣಿಗಳ ಮೇಲೆ ಬಡ್ಡಿಯ ದರ

(ಒಂದು ವರ್ಷಕ್ಕೆ ಶೇಕಡಾ ಪ್ರಮಾಣ)

| ಖಾತೆಯ ಪ್ರವರ್ಗ | | | ವರ್ಷಕ್ಕೆ ಶೇಕಡಾ ಪ್ರಮಾಣ |
|---|---|---|---|
| (i) | ಚಾಲ್ತಿ ಖಾತೆ | | ಇಲ್ಲ |
| (ii) | ಉಳಿತಾಯ ಖಾತೆ | | 4.0 |
| (iii) | ಸಾವಧಿ ಠೇವಣಿಗಳು | | |
| | (ಎ) | 15 ಲಕ್ಷ ರೂಪಾಯಿಗಿಂತ ಕಡಿಮೆ<br>15 ದಿವಸ ಮತ್ತು ಅದಕ್ಕೂ ಹೆಚ್ಚು | ಮುಕ್ತ ಸ್ವಾತಂತ್ರ್ಯ |
| | (ಬಿ) | 15 ಲಕ್ಷ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು<br>7 ದಿವಸ ಮತ್ತು ಅದಕ್ಕೂ ಹೆಚ್ಚು | ಮುಕ್ತ ಸ್ವಾತಂತ್ರ್ಯ |